
ಅರುಂಧತಿ ರಾಯ್


ಜುಂಪಾ ಲಾಹಿರಿ


ಸಾರಾ ಅಬೂಬಕರ್


ವೈದೇಹಿ


ಕವಿತಾ ಮಹಾಜನ್


ಕುಟ್ಟಿ ರೇವತಿ


ಸಿತಾರಾ ಎಸ್


ಅನಿತಾ ತಂಪಿ

ಆಫ್ರಿಕಾದಲ್ಲಿ ಮಹಿಳೆಯರ ಬದುಕಿನ ಹೋರಾಟಗಳ ಕುರಿತು ಬರೆದ ಕಾದಂಬರಿ ‘ನರ್ವಸ್ ಕಂಡಿಷನ್ಸ್’ (1988) ಓರ್ವ ಜಿಂಬಾಬ್ವೆಯ ಲೇಖಕಿ ಬರೆದ ಮೊಟ್ಟಮೊದಲ ಇಂಗ್ಲಿಷ್ ಕಾದಂಬರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಬೆಟ್ಟಿ ಶಮೀಯ ಎಂಬ ಅಮೆರಿಕನ್ ನಾಟಕಕಾರ್ತಿ, ನಟಿ ತನ್ನ ಚೊಚ್ಚಲ ರೊಮ್ಯಾಂಟಿಕ್ ಹಾಸ್ಯ ನಾಟಕ ‘ಟೂ ಸೂನ್’ (2021) ಕೃತಿಯಲ್ಲಿ ಮೂರು ತಲೆಮಾರಿನ ಪ್ಯಾಲೆಸ್ತೀನಿಯನ್ ಅಮೆರಿಕನ್ ಮಹಿಳೆಯರ ಆಶೋತ್ತರಗಳು, ಕಲೆ, ರಂಗಭೂಮಿ, ತಾಯ್ತನ ಮತ್ತು ಗಡಿಪಾರಿನ ಬದುಕಿನಲ್ಲಿ ಪಡುವ ತಳಮಳಗಳನ್ನು ಚಿತ್ರಿಸುತ್ತಾರೆ.

ಚೀನಾ ಮೂಲದ, ಆದರೆ ಕೊರಿಯನ್ ಭಾಷೆಯಲ್ಲಿ ಬರೆಯುವ ಜಿನ್ ಜಿನ್ ಜಿ ಉತ್ತರ ಕೊರಿಯಾದ ಓರ್ವ ಯುವತಿ ತನ್ನದಲ್ಲದ ದೇಶದಲ್ಲಿ ಅನುಭವಿಸುವ ಏಕಾಂಗಿತನ, ಪರಕೀಯತೆಯನ್ನು ಚೀನಾದಲ್ಲಿ ನೆಲೆಸಿದ ಉತ್ತರ ಕೊರಿಯನ್ ನಿರಾಶ್ರಿತರ ಹಳ್ಳಿಯೊಂದರ ಕುಟುಂಬಗಳ ಅಭದ್ರತೆಯ ಕತೆ ಹೇಳುವ, ‘ಓಕ್-ಹ್ವಾ’ (2012) ಕಾದಂಬರಿಯ ಮೂಲಕ ಜಗತ್ತಿಗೆ ತೆರೆದಿಡುತ್ತಾಳೆ.

ಬದಲಾಗುತ್ತಿರುವ ಹವಾಮಾನ, ನಶಿಸಿಹೋಗುತ್ತಿರುವ ಸಾಂಸ್ಕೃತಿಕ ಪರಂಪರೆ, ಅಲ್ಪಸಂಖ್ಯಾತರು ಅನುಭವಿಸುವ ಕಿರುಕುಳ ಮುಂತಾದ ವಸ್ತುಗಳನ್ನಾಧರಿಸಿದ ಕಥೆಗಳುಳ್ಳ ‘ದೇರ್ ಆರ್ ರಿವರ್ಸ್ ಇನ್ ದ ಸ್ಕೈ’ (2023) ಕೃತಿಯ ಕರ್ತೃ ಟರ್ಕಿಯ ಕಾದಂಬರಿಕಾರ್ತಿ, ಪ್ರಬಂಧಕಾರ್ತಿ ಎಲಿಫ್ ಷಫಕ್ ಮಹಿಳಾ ಸಾಹಿತ್ಯ ಅರಸುತ್ತಿರುವ ಹೊಸ ಆಯಾಮಗಳಿಗೆ ಸಾಕ್ಷಿಯಾಗಿದ್ದಾಳೆ.

ಸ್ಪೇನಿನ ಸುಂದರವಾದೊಂದು ಸಮುದ್ರ ದಂಡೆಯಲ್ಲಿರುವ ಪಟ್ಟಣದಲ್ಲಿ ವಾಸಿಸುವ ತಾಯಿ–ಮಗಳ ನಡುವಿನ ಸಂಬಂಧಗಳ ಸಂಘರ್ಷದ ಸುತ್ತ ಹೆಣೆದ ‘ಹಾಟ್ ಮಿಲ್ಕ್’ (2016) ಎಂಬ ಕಥೆ, ತನ್ನದೇ ಸೃಜನಶೀಲ ಬರವಣಿಗೆ ಹಾಗೂ ಬದುಕಿನ ಕುರಿತು ಒಳನೋಟಗಳುಳ್ಳ ಪ್ರಬಂಧಗಳ ಸಂಗ್ರಹ ‘ದ ಪೊಸಿಷನ್ ಆಫ್ ಸ್ಪೂನ್ಸ್’ (2021) ರೀತಿಯ ಕೃತಿಗಳನ್ನು ನೀಡಿದವರು ಬ್ರಿಟಿಷ್ ಕಾದಂಬರಿಕಾರ್ತಿ